080-22212343
080-22278803
ಅಂತರ್ಜಾಲ: https://kptcl.karnataka.gov.in
ಇ-ಮೇಲ್ ವಿಳಾಸ: director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್): ಯು40109ಕೆಎ1999ಎಸ್‌ಜಿ025521
ಕಂಪನಿ ಅಧಿಕೃತ ಕಛೇರಿ: ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು 560 009.

ಸಂಖ್ಯೆ: ಕವಿಪ್ರನಿನಿ/ಜಿಎಎ/415/1984-85/413 ಬಿ/1
ಲಗತ್ತು: ಸುತ್ತೋಲೆಯಲ್ಲಿರುವಂತೆ.

ದಿನಾಂಕ: 23 JUN 2022

## ಸುತ್ತೋಲೆ

ವಿಷಯ: ವಾಹನಗಳ ನೋಂದಣಿ ಫಲಕಗಳ ಮೇಲೆ ನಿಯಮಬಾಹಿರವಾಗಿ ಪ್ರದರ್ಶಿಸುತ್ತಿರುವ ಸಂಸ್ಥೆಯ ಹೆಸರು/ಚಿಹ್ನೆ/ಲಾಂಛನ ಇತ್ಯಾದಿ ಹೆಸರುಗಳನ್ನು ತೆರವುಗೊಳಿಸುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ಮುಖ್ಯ ಕಾರ್ಯದರ್ಶಿ ರವರ ಸುತ್ತೋಲೆ ಸಂಖ್ಯೆ ಟಿಡಿ 126 ಟಿಡಿಬಿ 2022 ದಿನಾಂಕ:19.05.2022.
2. ಆಯುಕ್ತರು, ಸಾರಿಗೆ ಮತ್ತು ರಸ್ತೆ ಸುರಕ್ಷತೆ, ಬೆಂಗಳೂರು ರವರ ಪತ್ರ ಸಂಖ್ಯೆ: ಸಾಆ/ನೋಂ-2/ಪಿಆರ್-37/2019-20 ದಿನಾಂಕ: 23.05.2022.
3. ನಿಗಮದ ಸುತ್ತೋಲೆ ಸಂಖ್ಯೆ: ಕವಿಪ್ರನಿನಿ/ಜಿಎಎ/415/1984-85/ಎನ್‌ಪಿ ದಿನಾಂಕ:27.08.2021 ಮತ್ತು 08.03.2022.

ನಿಗಮದ ವಾಹನಗಳ ಮೇಲೆ ಅನಧಿಕೃತವಾಗಿ ನಾಮ ಫಲಕ ಹಾಗೂ ಲಾಂಛನಗಳನ್ನು ಉಪಯೋಗಿಸುತ್ತಿರುವ ವಿಷಯದಲ್ಲಿ ನಿಗಮದ ಸುತ್ತೋಲೆ ಸಂಖ್ಯೆ: ಕವಿಪ್ರನಿನಿ/ಜಿಎಎ/415/1984-85/ಎನ್‌ಪಿ ದಿನಾಂಕ:27.08.2021 ಮತ್ತು ದಿನಾಂಕ: 23.05.2022 ರಲ್ಲಿ ನೀಡಿರುವ ಸೂಚನೆಗಳ ಕಡೆಗೆ ಗಮನವನ್ನು ಸೆಳೆಯುತ್ತಾ, ಕ್ರಿಮಿನಲ್ ಪಿಟಿಷನ್ ಸಂಖ್ಯೆ: 1850/2017 ರಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ: 20.04.2022 ರಂದು ನೀಡಿದ ನಿರ್ದೇಶನದ ಹಿನ್ನೆಲೆಯಲ್ಲಿ, ಸರ್ಕಾರದ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ ರವರು ಸುತ್ತೋಲೆ ಸಂಖ್ಯೆ: ಟಿಡಿ 126 ಟಿಡಿಬಿ 2022 ದಿನಾಂಕ: 19.05.2022 ರಲ್ಲಿ ನೀಡಿದ ಸೂಚನೆಗಳ ಸುತ್ತೋಲೆಯ ಪ್ರತಿಯನ್ನು ಈ ಸುತ್ತೋಲೆಯೊಂದಿಗೆ ಲಗತ್ತಿಸಿ ಕಳುಹಿಸಲಾಗಿದೆ.

ಆದ್ದರಿಂದ, ಮುಖ್ಯ ಇಂಜಿನಿಯರ್(ವಿ), ಪ್ರಸರಣ ವಲಯಗಳು ರವರು/ ಮುಖ್ಯ ಇಂಜಿನಿಯರ್(ವಿ), ಎಸ್.ಎಲ್.ಡಿ.ಸಿ., ಕವಿಪ್ರನಿನಿ, ಬೆಂಗಳೂರು ರವರು ತಮ್ಮ ಕಾರ್ಯವ್ಯಾಪ್ತಿಯಲ್ಲಿನ ಕಛೇರಿಗಳಲ್ಲಿ ಉಪಯೋಗಿಸುತ್ತಿರುವ ವಾಹನಗಳಿಗೆ ಸಂಬಂಧಿಸಿದಂತೆ (ಖಾಸಗಿ ವಾಹನಗಳೂ ಸೇರಿದಂತೆ) ಸದರಿ ಸುತ್ತೋಲೆಯಲ್ಲಿನ ಸೂಚನೆಗಳಂತೆ ತಕ್ಷಣವೇ ಕ್ರಮಗಳನ್ನು ಜರುಗಿಸಲು ಮತ್ತು ತಮ್ಮ <u>ಕಾರ್ಯ ವ್ಯಾಪ್ತಿಯಲ್ಲಿನ ಕಛೇರಿಗಳ ವಾಹನಗಳ ವಿಷಯದಲ್ಲಿ ಸೂಚನೆಗಳಂತೆ ಕ್ರಮಗಳನ್ನು ಜರುಗಿಸಿದ ಬಗ್ಗೆ ದಿನಾಂಕ: 29.06.2022 ರೊಳಗಾಗಿ ಕವಿಪ್ರನಿನಿ ನಿಗಮ ಕಾರ್ಯಾಲಯಕ್ಕೆ ತಪ್ಪದೇ ಅನುಪಾಲನಾ ವರದಿಯನ್ನು ಸಲ್ಲಿಸಲು ಸೂಚಿಸಲಾಗಿದೆ.</u>

ಮುಂದುವರೆದು, ಭವಿಷ್ಯದಲ್ಲಿಯೂ ಸಹ ಸಂಬಂಧಿಸಿದ ಎಲ್ಲಾ ಮುಖ್ಯ ಇಂಜಿನಿಯರ್(ವಿ) ರವರು /ಮೇಲಾಧಿಕಾರಿಗಳು ಅವರ ಕಾರ್ಯವ್ಯಾಪ್ತಿಯಲ್ಲಿನ ಕಛೇರಿಗಳು/ಅಧಿಕಾರಿಗಳು ಈ ಸೂಚನೆಗಳನ್ನು ತಪ್ಪದೇ ಪಾಲನೆ ಮಾಡುತ್ತಿರುವುದನ್ನು ಖಚಿತಪಡಿಸಿಕೊಳ್ಳಲು ಹಾಗೂ ಸೂಚನೆಗಳನ್ನು ಉಲ್ಲಂಘಿಸಿದ ಅಧಿಕಾರಿಗಳ ವಿರುದ್ಧ ಸೂಕ್ತ ಶಿಸ್ತು ಕ್ರಮಗಳನ್ನು ಜರುಗಿಸಲು ಸೂಚಿಸಿದೆ.

<u>ಮೆಮೋ</u>

ನಿರ್ದೇಶಕರು(ಆಡಳಿತ ಮತ್ತು ಮಾ.ಸಂ),
ಕವಿಪ್ರನಿನಿ.

ಕ್ರಮಾಂಕ:ಚಾವಿಸನಿನಿ/ಆ ಮತ್ತು ಮಾ.ಸಂ./05/04/2022-23/ Cys-504 ದಿನಾಂಕ: 06 JUL 2022

ನಿರ್ದೇಶಕರು(ಆ ಮತ್ತು ಮಾಸಂ), ಕವಿಪ್ರನಿನಿ, ಬೆಂಗಳೂರುರವರ ಆದೇಶ ಪತ್ರ ಸಂಖ್ಯೆ:ಕವಿಪ್ರನಿನಿ/ಬಿಆರ್‌ಎ/ಎಸ್‌ಎ3/.

ಮು.ತಿ.ನೋ.

AGM-2
/07/2022

5474/97-98/II ದಿನಾಂಕ:24.06.2022ರ ಆದೇಶವನ್ನು ಚಾವಿಸನಿನಿಯಲ್ಲಿ ಯಥಾವತ್ತಾಗಿ ಅಳವಡಿಸಿಕೊಳ್ಳಲು ಆದೇಶಿಸಲಾಗಿದೆ.

ಪ್ರಧಾನ ವ್ಯವಸ್ಥಾಪಕರು(ಆ ಮತ್ತು ಮಾ.ಸಂ)
ಚಾ.ವಿ.ಸ.ನಿ.ನಿ., ಮೈಸೂರು.

ಪ್ರತಿಗಳು:

- ಮುಖ್ಯ ಆರ್ಥಿಕ ಅಧಿಕಾರಿ, ಚಾವಿಸನಿನಿ., ಮೈಸೂರುರವರ ಅವಗಾಹನೆಗಾಗಿ.
- ಮುಖ್ಯ ಪ್ರಧಾನ ವ್ಯವಸ್ಥಾಪಕರು(ಆಂ.ಪ), ನಿಗಮ ಕಛೇರಿ, ಮೈಸೂರು.
- ಮುಖ್ಯ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವಲಯ, ಚಾವಿಸನಿನಿ., ಹಾಸನ/ಮೈಸೂರು.
- ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವೃತ್ತ, ಚಾವಿಸನಿನಿರವರ ಮಾಹಿತಿಗಾಗಿ.
- ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವಿಭಾಗ, ಚಾವಿಸನಿನಿ.,ರವರ ಮಾಹಿತಿಗಾಗಿ.
- ಉಪ ಪ್ರಧಾನ ವ್ಯವಸ್ಥಾಪಕರು(ಎಂ.ಐ.ಎಸ್), ನಿಗಮ ಕಛೇರಿ, ಮೈಸೂರುರವರಿಗೆ ನಿಗಮದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
- ಮಾನ್ಯ ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು(ತಾಂ)/ಮುಖ್ಯ ಆರ್ಥಿಕ ಸಲಹೆಗಾರರು ಇವರ ಆಪ್ತ ಕಾರ್ಯದರ್ಶಿಗಳಿಗೆ ಕಳುಹಿಸುತ್ತಾ ಪ್ರತಿಯನ್ನು ಮಾನ್ಯ ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು(ತಾಂ)/ ಮುಖ್ಯ ಆರ್ಥಿಕ ಸಲಹೆಗಾರರುರವರ ಗಮನಕ್ಕೆ ತರುವಂತೆ ಕೋರಿದೆ.
- ಸ-2(ಆ ಮತ್ತು ಮಾ.ಸಂ)/ಪ್ರ.ಕ.

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ: 2022-23ನೇ ಸಾಲಿನಲ್ಲಿ ಮಾಡುವ ಸರ್ಕಾರಿ ನೌಕರರ ಸಾರ್ವತ್ರಿಕ ವರ್ಗಾವಣೆ ಮಾರ್ಗಸೂಚಿಗಳು.**

ಓದಲಾಗಿದೆ:-

ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 16 ಸೇನೌವ 2022 ಬೆಂಗಳೂರು ದಿನಾಂಕ: 30.04.2022.

ಪ್ರಸ್ತಾವನೆ:-

ಮೇಲೆ ಓದಲಾದ ಸರ್ಕಾರಿ ಆದೇಶದಲ್ಲಿ, 2022-23ನೇ ಸಾಲಿನ ಸರ್ಕಾರಿ ನೌಕರರ ವರ್ಗಾವಣೆಗಳನ್ನು ಸದರಿ ಆದೇಶದಲ್ಲಿ ವಿವರಿಸಿರುವ ಷರತ್ತುಗಳಿಗೊಳಪಟ್ಟು ದಿನಾಂಕ: 15.06.2022ರವರೆಗೆ ಕೈಗೊಳ್ಳಲು ಆದೇಶಿಸಲಾಗಿತ್ತು. ಸದರಿ ಸಾರ್ವತ್ರಿಕ ವರ್ಗಾವಣೆ ಅವಧಿಯನ್ನು ಮತ್ತೆ ವಿಸ್ತರಿಸುವುದು ಅವಶ್ಯವೆಂದು ಸರ್ಕಾರವು ಪರಿಗಣಿಸಿ ಈ ಕೆಳಕಂಡಂತೆ ಆದೇಶಿಸಿದೆ :-

**ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 16 ಸೇನೌವ 2022**
**ಬೆಂಗಳೂರು, ದಿನಾಂಕ: 15.06.2022.**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ದಿನಾಂಕ 30.04.2022ರ ಸರ್ಕಾರಿ ಆದೇಶದಲ್ಲಿ ವಿವರಿಸಿರುವ ಷರತ್ತಿಗೊಳಪಟ್ಟು, **2022-23ನೇ ಸಾಲಿನ ಸಾರ್ವತ್ರಿಕ ವರ್ಗಾವಣಾ ಅವಧಿಯನ್ನು ದಿನಾಂಕ: 30.06.2022 ರವರೆಗೆ ವಿಸ್ತರಿಸಿ ಆದೇಶಿಸಿದೆ.**

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

15-6-2022
(ವೀರಭದ್ರ)
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಸೇವಾ ನಿಯಮಗಳು-1).

**ಇವರಿಗೆ,**
ಸಂಕಲನಕಾರರು, ಇ-ರಾಜ್ಯಪತ್ರ.

ಪ್ರತಿ:-

1. ಪ್ರಧಾನ ಮಹಾಲೇಖಪಾಲರು (ಜಿ&ಎಸ್ಎಸ್ಎ)/(ಇ&ಆರ್ಎಸ್ಎ)/(ಎ&ಇ), ಕರ್ನಾಟಕ, ಬೆಂಗಳೂರು.
2. ಸರ್ಕಾರದ ಮುಖ್ಯ ಕಾರ್ಯದರ್ಶಿಯವರು, ವಿಧಾನಸೌಧ, ಬೆಂಗಳೂರು.

3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರು.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರು ಹಾಗೂ ಅಭಿವೃದ್ಧಿ ಆಯುಕ್ತರು.
5. ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿಯವರು/ಕಾರ್ಯದರ್ಶಿಯವರು.
6. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು.
7. ರಾಜ್ಯಪಾಲರ ವಿಶೇಷ ಕಾರ್ಯದರ್ಶಿಯವರು.
8. ಎಲ್ಲಾ ಇಲಾಖಾ ಮುಖ್ಯಸ್ಥರು.
9. ಎಲ್ಲಾ ಪ್ರಾದೇಶಿಕ ಆಯುಕ್ತರು.
10. ಎಲ್ಲಾ ಜಿಲ್ಲಾಧಿಕಾರಿಗಳು/ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು/ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು.
11. *ಕಾರ್ಯದರ್ಶಿ, ಕರ್ನಾಟಕ ವಿಧಾನ ಸಭೆ/ಪರಿಷತ್ತು, ಬೆಂಗಳೂರು.
12. *ಮಹಾನಿಬಂಧಕರು, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು.
13. *ನಿಬಂಧಕರು, ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿ, ಕಂದಾಯ ಭವನ, ಕೆ.ಜಿ.ರಸ್ತೆ, ಬೆಂಗಳೂರು-9
14. *ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬಹುಮಹಡಿ ಕಟ್ಟಡ, ಬೆಂಗಳೂರು
15. *ನಿಬಂಧಕರು, ಕರ್ನಾಟಕ ಮೇಲ್ಮನವಿ ಪ್ರಾಧಿಕಾರ, ಬಹುಮಹಡಿ ಕಟ್ಟಡ, ಬೆಂಗಳೂರು.
16. *ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಉದ್ಯೋಗ ಸೌಧ, ಬೆಂಗಳೂರು.
17. ಎಲ್ಲಾ ಸಚಿವರ/ರಾಜ್ಯ ಸಚಿವರ ಆಪ್ತ ಕಾರ್ಯದರ್ಶಿಗಳು.
18. ನಿವಾಸಿ ಆಯುಕ್ತರು, ಕರ್ನಾಟಕ ಭವನ, ಕೌಟಿಲ್ಯ ಮಾರ್ಗ್, ಚಾಣಕ್ಯಪುರಿ, ನವದೆಹಲಿ-110 011.
19. ಸರ್ಕಾರದ ಎಲ್ಲಾ ವಿಶೇಷ/ಅಪರ/ಜಂಟಿ/ಉಪ/ಅಧೀನ ಕಾರ್ಯದರ್ಶಿಗಳು.
20. ಸಚಿವಾಲಯದ ಎಲ್ಲಾ ಶಾಖೆಗಳು.
21. ಅಧ್ಯಕ್ಷರು, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಬೆಂಗಳೂರು.
22. ಶಾಖಾ ರಕ್ಷಾ ಕಡತ/ಬಿಡಿ ಪ್ರತಿಗಳು.

**(*ಪ್ರತ್ಯೇಕ ಪತ್ರದೊಂದಿಗೆ)**